I/414667/2023

**ಕರ್ನಾಟಕ ಸರ್ಕಾರ**
**GOVERNMENT OF KARNATAKA**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು) ರವರ ಕಛೇರಿ
Office of the
Principal Chief Conservator of Forests
(Head of Forest Force)

ಅರಣ್ಯಭವನ, 18ನೇಅಡ್ಡರಸ್ತೆ
ಮಲ್ಲೇಶ್ವರಂ, ಬೆಂಗಳೂರು-560003
Aranya Bhavan, 18th Cross
Malleshwaram, Bengaluru- 03
Telephone: 080 23367123
Email:apccfpr@gmail.com

E-office No.:KFD/HOFF/B4(EST)/14/2023-PnR-KFD **E-1031728**
Date: 06-04-2023

## ಅಧಿಕೃತ ಜ್ಞಾಪನ

**ವಿಷಯ:-** ದಿನಾಂಕ: 01-01-2020 ರಿಂದ 31-12-2022ರವರೆಗೆ ಅರಣ್ಯ ಭವನದ ವಿವಿಧ ಘಟಕ ಕಛೇರಿಗಳಲ್ಲಿ ಗ್ರೂಪ್-'ಡಿ' (Group-D) ವೃಂದದ ವೇತನ ಶ್ರೇಣಿ: 17000-400-18600-450-20400-500-22400-550-24600-600-27000-650-28950 ರಲ್ಲಿ ಕಾರ್ಯ ನಿರ್ವಹಿಸುತ್ತಿರುವ/ನಿರ್ವಹಿಸಿರುವ ನೌಕರರ ಕರಡು ಜ್ಯೇಷ್ಠತಾ ಪಟ್ಟಿ(Draft Seniority List) ಯನ್ನು ಪ್ರಕಟಿಸುವ ಬಗ್ಗೆ.

**ಉಲ್ಲೇಖ:-**
1. ಈ ಕಛೇರಿಯ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಬಿ4/ಸಿಬ್ಬಂದಿ/ಸಿಆರ್-33/2020-21, ದಿನಾಂಕ:18-12-2020.
2. ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಾವಳಿ 1957ರ ನಿಯಮ 10(1).
3. ಸರ್ಕಾರದ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಸಿಆಸುಇ 106 ಸೇನೆನಿ 2021, ದಿನಾಂಕ:10-12-2021.

**ಪ್ರಸ್ತಾವನೆ:**

1. ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಾವಳಿ 1957ರ ನಿಯಮ 10(1) ರನ್ವಯ ಪ್ರತಿಯೊಂದು ಸಾಲಿನಲ್ಲಿ ಪ್ರತಿಯೊಂದು ವೃಂದದಲ್ಲಿನ ಅಧಿಕಾರಿ/ಸಿಬ್ಬಂದಿಗಳ ಜ್ಯೇಷ್ಠತಾ ಪಟ್ಟಿ (Seniority List) ಯನ್ನು ತಯಾರಿಸುವುದು ಕಡ್ಡಾಯವಾಗಿರುತ್ತದೆ.

2. ಉಲ್ಲೇಖ (1)ರಲ್ಲಿನ ಈ ಕಛೇರಿಯ ಅಧಿಕೃತ ಜ್ಞಾಪನ ಪತ್ರದಲ್ಲಿ ಅರಣ್ಯ ಭವನದ ವಿವಿಧ ಘಟಕ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ/ನಿರ್ವಹಿಸಿರುವ ಗ್ರೂಪ್-ಡಿ (Group-D) ವೃಂದದ ವೇತನ ಶ್ರೇಣಿ: 17000-400-18600-450-20400-500-22400-550-24600-600-27000-650-28950ರಲ್ಲಿನ ನೌಕರರ ದಿನಾಂಕ: 27-04-1978 ರಿಂದ 31-12-2019 ರವರೆಗೆ ಜ್ಯೇಷ್ಠತಾ ನಿಯಮಗಳನ್ವಯ ಜ್ಯೇಷ್ಠತಾ ಪಟ್ಟಿ (Seniority List)ಯನ್ನು ಅಂತಿಮವಾಗಿ ಜ್ಯೇಷ್ಠತಾ ಕ್ರಮ ಸಂಖ್ಯೆ 1 ರಿಂದ 83 ರವರೆಗೆ ಪ್ರಕಟಿಸಲಾಗಿರುತ್ತದೆ.

3. ಈ ಮಧ್ಯೆ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 106 ಸೇನೆನಿ 2021 ದಿನಾಂಕ:10.12.2021ರಲ್ಲಿ *"ರಾಜ್ಯ ಸಿವಿಲ್ ಸೇವೆಗಳಲ್ಲಿನ ಯಾವುದೇ ವೃಂದದ ಹುದ್ದೆಗಳನ್ನು ಭರ್ತಿ ಮಾಡಲು ಸಂಬಂಧಿಸಿದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನೇರ ನೇಮಕಾತಿ ಮತ್ತು ಮುಂಬಡ್ತಿಗಾಗಿ ಅನುಪಾತ/ ಪ್ರತಿಶತ ಪ್ರಮಾಣವನ್ನು ನಿಗದಿಪಡಿಸಿದ್ದಲ್ಲಿ, ನಿಗದಿಪಡಿಸಿದ ಅನುಪಾತ/ಪ್ರತಿಶತದನ್ವಯ ಹುದ್ದೆಆಧಾರಿತವಾಗಿ ನೇರ ನೇಮಕಾತಿಗೆ ಮತ್ತು ಮುಂಬಡ್ತಿಗಳಿಗೆ ಒಟ್ಟು ಹುದ್ದೆಗಳನ್ನು ವರ್ಗೀಕರಣ ಮಾಡತಕ್ಕದ್ದು. ಈ ಉದ್ದೇಶಕ್ಕಾಗಿ ಆ ವೃಂದದಲ್ಲಿನ ಶಾಶ್ವತ ಹುದ್ದೆಗಳ ಜೊತೆಗೆ ತಾತ್ಕಾಲಿಕ ಹುದ್ದೆಗಳು ಸಹ ಒಳಗೊಂಡಿರುತ್ತವೆ. ನೇರ ನೇಮಕಾತಿ ಮತ್ತು ಮುಂಬಡ್ತಿಗಾಗಿ ಹುದ್ದೆಗಳನ್ನು ಮೇಲ್ಕಂಡಂತೆ ವರ್ಗೀಕರಿಸಿದ ನಂತರ ನೇರ ನೇಮಕಾತಿಗಾಗಿ ವರ್ಗೀಕರಿಸಿದ ಹುದ್ದೆಗಳನ್ನು ನೇರ ನೇಮಕಾತಿಯಿಂದಲೇ ಮತ್ತು ಮುಂಬಡ್ತಿಗಾಗಿ ವರ್ಗೀಕರಿಸಿದ ಹುದ್ದೆಗಳನ್ನು ಮುಂಬಡ್ತಿಯಿಂದಲೇ ಭರ್ತಿ ಮಾಡತಕ್ಕದ್ದು"* ಎಂದು ತಿಳಿಸಲಾಗಿರುತ್ತದೆ.

4. ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಾವಳಿ 1957ರ ನಿಯಮ 10(1)ರ ಅನ್ವಯ ಹಾಗೂ ಸರ್ಕಾರಿ ಆದೇಶಗಳು/ಸುತ್ತೋಲೆಗಳನ್ನು ಅನುಸರಿಸಿ ದಿನಾಂಕ:01-01-2020 ರಿಂದ 31-12-

I/414667/2023

2022ರ ವರೆಗಿನ ಅರಣ್ಯ ಭವನದ ವಿವಿಧ ಘಟಕ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗ್ರೂಪ್-ಡಿ ನೌಕರರ (Group-D) ವೃಂದದಲ್ಲಿ ಅರಣ್ಯ ಇಲಾಖೆಯಲ್ಲಿ ಯಾವುದೇ ನೇರ ನೇಮಕಾತಿ ಪ್ರಕ್ರಿಯೆಯು ನಡೆದಿರುವುದಿಲ್ಲ. ಆದಾಗ್ಯೂ ದಿನಾಂಕ: 01-01-2020 ರಿಂದ 09-12-2021ರವರೆಗಿನ ಅವಧಿಗೆ ಸದರಿ ಅವಧಿಯಲ್ಲಿ ಉದ್ಭವವಾದ ಅರಣ್ಯ ಭವನದ ವಿವಿಧ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ/ನಿರ್ವಹಿಸಿರುವ ಗ್ರೂಪ್-'ಡಿ' (Group-D) ವೇತನ ಶ್ರೇಣಿ: 17000-400-18600-450-20400-500-22400-550-24600-600-27000-650-28950ಗೆ ಸೇರಿದ ನೌಕರರ [ಅರಣ್ಯ ವಿಶ್ರಾಂತಿ ಗೃಹಗಳ ಕೇರ್ ಟೇಕರ್/ ತಿಂಡಲ್/ ವಾರ್ಡ್ ಬಾಯ್/ ಲಷ್ಕರ್/ ಫಿಮೇಲ್ ವಾರ್ಡ್ ಸರ್ವೆಂಟ್/ ಸ್ವೀಪರ್/ ಸ್ಕಾವೆಂಜರ್/ ಕೂಲಿ/ ಮಾಲಿ/ ದಲಾಯತ್/ ಗಾರ್ಡನರ್/ ಕ್ಲೀನರ್/ ವಾಚ್‌ಮನ್] ಹುದ್ದೆಗಳ ವಿವರಗಳನ್ನು ಅನುಬಂಧ-1ರಲ್ಲಿ ಹಾಗೂ ಸದರಿ ನೌಕರರ ಕರಡು ಜ್ಯೇಷ್ಠತಾ ಪಟ್ಟಿ (Draft Seniority List) ಯನ್ನು ಅನುಬಂಧ-2 ರಲ್ಲಿ ಶೂನ್ಯ ಮಾಹಿತಿಯೊಂದಿಗೆ ಪ್ರಕಟಿಸಲು ತೀರ್ಮಾನಿಸಿ ಈ ಕೆಳಕಂಡ ಆದೇಶ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಾವಳಿ 1957ರ ನಿಯಮ 10(1) ರನ್ವಯ ದಿನಾಂಕ:01-01-2020 ರಿಂದ 09-12-2021ರ ವರೆಗಿನ ಅವಧಿಗೆ ಅರಣ್ಯ ಭವನದ ವಿವಿಧ ಘಟಕ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ/ನಿರ್ವಹಿಸಿರುವ ಗ್ರೂಪ್-'ಡಿ' (Group-D) ವೃಂದದ ವೇತನ ಶ್ರೇಣಿ: 17000-400-18600-450-20400-500-22400-550-24600-600-27000-650-28950ಗೆ ಸೇರಿದ ನೌಕರರ ***[ಅರಣ್ಯ ವಿಶ್ರಾಂತಿ ಗೃಹಗಳ ಕೇರ್ ಟೇಕರ್/ ತಿಂಡಲ್/ ವಾರ್ಡ್ ಬಾಯ್/ ಲಷ್ಕರ್/ ಫಿಮೇಲ್ ವಾರ್ಡ್ ಸರ್ವೆಂಟ್/ ಸ್ವೀಪರ್/ ಸ್ಕಾವೆಂಜರ್/ ಕೂಲಿ/ ಮಾಲಿ/ ದಲಾಯತ್/ ಗಾರ್ಡನರ್/ ಕ್ಲೀನರ್/ವಾಚ್‌ಮನ್]*** **ಕರಡು ಜ್ಯೇಷ್ಠತಾ ಪಟ್ಟಿ (Draft Seniority List) ಯನ್ನು ಅನುಬಂಧ-1 ಮತ್ತು ಅನುಬಂಧ-2 ರಲ್ಲಿ ಪ್ರಕಟಿಸಿ ಆದೇಶಿಸಿದೆ.**

ಈ ಕರಡು ಜ್ಯೇಷ್ಠತಾ ಪಟ್ಟಿಯ ಕುರಿತು ಬಾದಿತರಾದವರು ಆಕ್ಷೇಪಣೆಗಳನ್ನು **ಸ್ಪಷ್ಟ ರೀತಿಯಲ್ಲಿ ಪೂರಕ ಸಮರ್ಥನೀಯ ದಾಖಲಾತಿಗಳೊಂದಿಗೆ** ಇಲಾಖೆಯ ವೆಬ್‌ಸೈಟ್ www.aranya.gov.in ರಲ್ಲಿ ಈ ಆದೇಶವನ್ನು ಪ್ರಕಟಿಸಿದ 21 ದಿನಗಳೊಳಗಾಗಿ ಈ ಕಛೇರಿಯ ಸಂಬಂಧಿಸಿದ ಶಾಖೆಯ ಇ-ಮೇಲ್ ವಿಳಾಸ "b4sec.pccf@gmail.com" ರ ಮೂಲಕ ಸಲ್ಲಿಸಬಹುದಾಗಿದೆ. ಈ ಕುರಿತು ತಾಂತ್ರಿಕ ಸಹಾಯವನ್ನು ಬೇಕಾದಲ್ಲಿ ಈ ಕಛೇರಿಯ ಬಿ4 ಶಾಖೆಗೆ ಸಂಪರ್ಕಿಸಬಹುದಾಗಿದೆ.

ಇತರೆ ಮಾಧ್ಯಮದ *[ಭೌತಿಕವಾಗಿ/ ಬೇರೆ ಇ-ಮೇಲ್ ಗಳಿಗೆ/ ದೂರವಾಣಿ/ ಸಾಮಾಜಿಕ ಮಾಧ್ಯಮ (Social media) ಮುಂತಾದ ಇತರೆ ಮಾಧ್ಯಮಗಳ]* ಮೂಲಕ ಕಳುಹಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಸ್ಪಷ್ಟಪಡಿಸಿದೆ. ಅಲ್ಲದೇ, ಅಸ್ಪಷ್ಟ ಆಕ್ಷೇಪಣೆಗಳನ್ನು ಹಾಗೂ ನಿಗದಿತ ದಿನಾಂಕ ಮೀರಿ ಸ್ವೀಕರಿಸಿದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

Signed by Raj Kishore
Singh, Ifs
Date: 06-04-2023 15:36:31

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ, ಮುಖ್ಯಸ್ಥರು)

**ಪ್ರತಿ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ:**

1. ಅರಣ್ಯ ಭವನದಲ್ಲಿನ ಎಲ್ಲಾ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
2. ಅರಣ್ಯ ಭವನದಲ್ಲಿನ ಎಲ್ಲಾ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
3. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮಾಹಿತಿ ಸಂವಹನ ತಂತ್ರಜ್ಞಾನ), ಅರಣ್ಯ ಭವನ, ಬೆಂಗಳೂರು- **ಈ ಆದೇಶವನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.**
4. ಅರಣ್ಯ ಭವನದ ವಿವಿಧ ಘಟಕ ಕಛೇರಿಗಳಲ್ಲಿ ಲೀನ್ ಇರುವ/ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಗ್ರೂಪ್-'ಡಿ' (Group-D) ವೃಂದದ ವೇತನ ಶ್ರೇಣಿ: 17000-400-18600-450-20400-500-22400-550-24600-600-27000-650-28950ಗೆ ಸೇರಿದ ಸಿಬ್ಬಂದಿಗಳಿಗೆ – **ಇಲಾಖಾ ವೆಬ್‌ಸೈಟ್ ನಲ್ಲಿ ಈ ಪ್ರಕಟಣೆಯ ಮೂಲಕ**

I/414666/2023

# ಅನುಬಂಧ -1
# ಭಾಗ-1

## ಹುದ್ದೆಗಳ ವಾಸ್ತವಿಕ ಮಾಹಿತಿ

**ದಿನಾಂಕ: 01-01-2020 ರಿಂದ 31-12-2022ರವರೆಗೆ** ಅರಣ್ಯ ಭವನದ ವಿವಿಧ ಘಟಕ ಕಛೇರಿಗಳಲ್ಲಿ **ಗ್ರೂಪ್-'ಡಿ' (Group-D) ವೃಂದದ ವೇತನ ಶ್ರೇಣಿ:** 17000-400-18600-450-20400-500-22400-550-24600-600-27000-650-28950 ***[ಅರಣ್ಯ ವಿಶ್ರಾಂತಿ ಗೃಹಗಳ ಕೇರ್ ಟೇಕರ್/ ತಿಂಡಲ್/ ವಾರ್ಡ್ ಬಾಯ್/ ಲಷ್ಕರ್/ ಫಿಮೇಲ್ ವಾರ್ಡ್ ಸರ್ವೆಂಟ್/ ಸ್ವೀಪರ್/ ಸ್ಕಾವೆಂಜರ್/ ಕೂಲಿ/ ಮಾಲಿ/ ದಲಾಯತ್/ ಗಾರ್ಡನರ್/ ಕ್ಲೀನರ್/ವಾಚ್‌ಮನ್]*** ರಲ್ಲಿ ಕಾರ್ಯ ನಿರ್ವಹಿಸುತ್ತಿರುವ/ನಿರ್ವಹಿಸಿರುವ ನೌಕರರ **ಕರಡು ಜ್ಯೇಷ್ಠತಾ ಪಟ್ಟಿ(Draft Seniority List)**

| ಕ್ರ. ಸಂ | ವೃಂದದ ಹೆಸರು | ಬ್ಲಾಕ್ ಅವಧಿ | | ಬ್ಲಾಕ್ ಅವಧಿಯಲ್ಲಿ ಉದ್ಭವವಾದ ರಿಕ್ತ ಸ್ಥಾನಗಳು | ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಲಾದ ಕೋಟಾ | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ನೇರ ನೇಮಕಾತಿಗೆ ಮತ್ತು ಮುಂಬಡ್ತಿಗೆ ವರ್ಗೀಕರಿಸಲಾದ ಹುದ್ದೆಗಳ ಸಂಖ್ಯೆ | | ವಾಸ್ತವವಾಗಿ ಭರ್ತಿ ಮಾಡಲಾದ ಹುದ್ದೆಗಳ ಸಂಖ್ಯೆ | | ಹುದ್ದೆಗಳ ಅನುಪಾತ (Quota) ಮತ್ತು ಭರ್ತಿ ಮಾಡಲಾದ ಹುದ್ದೆಗಳ ನಡುವಿನ ಸಂಖ್ಯಾ ವ್ಯತ್ಯಾಸ | | | | ವಾಸ್ತವವಾಗಿ ಲಭ್ಯವಾಗುವ ಖಾಲಿ ಹುದ್ದೆಗಳ ಸಂಖ್ಯೆ | | ಷರಾ |
|---|---|---|---|---|---|---|---|---|---|---|---|---|---|---|---|---|
| | | ಇಂದ | ವರೆಗೆ | | | | | | | ಹೆಚ್ಚುವರಿ | | ಕೊರತೆ | | | | |
| | | | | | | ನೇರ | ಮುಂಬಡ್ತಿ | ನೇರ | ಮುಂಬಡ್ತಿ | ನೇರ | ಮುಂಬಡ್ತಿ | ನೇರ | ಮುಂಬಡ್ತಿ | ನೇರ | ಮುಂಬಡ್ತಿ | |
| **1** | **2** | **2A** | **2B** | **2C** | **2 D** | **3** | **4** | **5** | **6** | **7** | **8** | **9** | **10** | **11** | **12** | **13** |
| 1 | ಗ್ರೂಪ್- 'ಡಿ' (Group-D) ವೇತನ ಶ್ರೇಣಿ: 17000-28950 | 01.01.2020 | 31.12.2022 | 11 | DR:PR (1:0) | 11 | - | 0 | - | 0 | - | (-)11 | - | 13* | - | *ದಿನಾಂಕ:01-01-2020 ರ ಹಿಂದಿನ ಅವಧಿಯಲ್ಲಿ ವಯೋ ನಿವೃತ್ತಿ/ಬಡ್ತಿ/ವೃಂದ ಬದಲಾವಣೆ/ನಿಧನ/ರಾಜೀನಾಮೆಯಿಂದ ಉದ್ಭವವಾದ ರಿಕ್ತ ಸ್ಥಾನಗಳು (ಮುಂದೊಯ್ದ ಹುದ್ದೆಗಳು): 2<br><br>**2020:** ನಿವೃತ್ತಿ-2, ಬಡ್ತಿ-1<br>**2021:** ನಿವೃತ್ತಿ-3, ನಿಧನ-2, ಬಡ್ತಿ-2<br>**2022:** ನಿವೃತ್ತಿ-1 |

**ದಿನಾಂಕ:** 06.04.2023
**ಸ್ಥಳ:** ಬೆಂಗಳೂರು

Signed by Raj Kishore Singh, Ifs
Date: 06-04-2023 15:36:08

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)

I/414668/2023

# ಅನುಬಂಧ - 2

**ದಿನಾಂಕ: 01-01-2020 ರಿಂದ 31-12-2022ರವರೆಗೆ** ಅರಣ್ಯ ಭವನದ ವಿವಿಧ ಘಟಕ ಕಛೇರಿಗಳಲ್ಲಿ **ಗ್ರೂಪ್-'ಡಿ' (Group-D) ವೃಂದದ ವೇತನ ಶ್ರೇಣಿ:** 17000-400-18600-450-20400-500-22400-550-24600-600-27000-650-28950 ***[ಅರಣ್ಯ ವಿಶ್ರಾಂತಿ ಗೃಹಗಳ ಕೇರ್ ಟೇಕರ್/ ತಿಂಡಲ್/ ವಾರ್ಡ್ ಬಾಯ್/ ಲಷ್ಕರ್/ ಫೀಮೇಲ್ ವಾರ್ಡ್ ಸರ್ವೆಂಟ್/ ಸ್ವೀಪರ್/ ಸ್ಕಾವೆಂಜರ್/ ಕೂಲಿ/ ಮಾಲಿ/ ದಲಾಯತ್/ ಗಾರ್ಡನರ್/ ಕ್ಲೀನರ್/ವಾಚ್‌ಮನ್]*** ರಲ್ಲಿ ಕಾರ್ಯ ನಿರ್ವಹಿಸುತ್ತಿರುವ/ನಿರ್ವಹಿಸಿರುವ ನೌಕರರ **ಕರಡು ಜ್ಯೇಷ್ಠತಾ ಪಟ್ಟಿ(Draft Seniority List)**

1. **ಇಲಾಖೆ:** ಕರ್ನಾಟಕ ಅರಣ್ಯ ಇಲಾಖೆ
2. **ವೃಂದದ ಹೆಸರು:** ಗ್ರೂಪ್-'ಡಿ' (Group-D) ವೃಂದ ವೇತನ ಶ್ರೇಣಿ:17000-28950
3. **ವೃಂದದಲ್ಲಿನ ಒಟ್ಟು ಹುದ್ದೆಗಳ ಸಂಖ್ಯೆ:** 42 *[ಅರಣ್ಯ ಭವದ ವಿವಿಧ ಘಟಕ ಕಛೇರಿಗಳಿಗೆ ಮಾತ್ರ ಸಂಬಂಧಿಸಿದಂತೆ]*
4. **ನೇಮಕಾತಿ ನಿಯಮಗಳ ಅನುಸಾರ ನೇಮಕಾತಿ ವಿಧಾನ:** ನೇರ ನೇಮಕಾತಿ ವಿಧಾನ

ಈ ಕಛೇರಿಯ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಬಿ4/ಸಿಬ್ಬಂದಿ/ಸಿಆರ್-33/2020-21, ದಿನಾಂಕ:18-12-2020ರಲ್ಲಿ ಅರಣ್ಯ ಭವನದ ವಿವಿಧ ಘಟಕ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ/ನಿರ್ವಹಿಸಿರುವ ಗ್ರೂಪ್-'ಡಿ' (Group-D) ವೃಂದದ ವೇತನ ಶ್ರೇಣಿ 17000-400-18600-450-20400-500-22400-550-24600-600-27000-650-28950ರಲ್ಲಿನ ನೌಕರರ ದಿನಾಂಕ: 27-04-1978 ರಿಂದ 31-12-2019ರವರೆಗೆ ಜ್ಯೇಷ್ಠತಾ ನಿಯಮಗಳನ್ವಯ ಅಂತಿಮ ಜ್ಯೇಷ್ಠತಾ ಪಟ್ಟಿ (Final Seniority List)ಯನ್ನು ಜ್ಯೇಷ್ಠತಾ ಕ್ರಮ ಸಂಖ್ಯೆ 1 ರಿಂದ 83 ರವರೆಗೆ ಈಗಾಗಲೇ ಪ್ರಕಟಿಸಲಾಗಿರುತ್ತದೆ. ಪ್ರಸ್ತುತ ದಿನಾಂಕ: 01-01-2020 ರಿಂದ 31-12-2022ರವರೆಗೆ ಅರಣ್ಯ ಭವನದ ವಿವಿಧ ಘಟಕ ಕಛೇರಿಗಳಲ್ಲಿ ಸದರಿ ವೃಂದಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ/ನಿರ್ವಹಿಸಿರುವ ನೌಕರರ ಕರಡು ಜ್ಯೇಷ್ಠತಾ ಪಟ್ಟಿ(Draft Seniority List) ಯನ್ನು ಪ್ರಕಟಿಸಲಾಗುತ್ತಿದೆ.

**ದಿನಾಂಕ: 01-01-2020 ರಿಂದ 31-12-2022ರವರೆಗೆ** ಅರಣ್ಯ ಭವನದ ವಿವಿಧ ಘಟಕ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ/ನಿರ್ವಹಿಸಿರುವ **ಗ್ರೂಪ್-'ಡಿ' (Group-D) ವೃಂದದ** (ವೇತನ ಶ್ರೇಣಿ:17000-28950) **ಕರಡು** ಜ್ಯೇಷ್ಠತಾ **ಪಟ್ಟಿ (Draft seniority List).**

| ಕ್ರ. ಸಂ. | ಹೆಸರು | ಮೀಸಲಾತಿ ವರ್ಗ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ವಾಸ್ತವವಾಗಿ ಮುಂಬಡ್ತಿ ಹೊಂದಿದ ದಿನಾಂಕ | ಅರ್ಹತಾ ದಿನಾಂಕ |
|---|---|---|---|---|---|---|
| 1 | 2 | 3 | 4 | 5 | 6 | 7 |
| ದಿನಾಂಕ: 01-01-2020 ರಿಂದ 31-12-2022ರವರೆಗೆ ಅರಣ್ಯ ಭವನದ ವಿವಿಧ ಘಟಕ ಕಛೇರಿಗಳಲ್ಲಿ ಗ್ರೂಪ್-'ಡಿ' (Group-D) (ವೇತನ ಶ್ರೇಣಿ:17000-28950) ವೃಂದದಲ್ಲಿ ಯಾವುದೇ ನೇರ ನೇಮಕಾತಿ ಪ್ರಕ್ರಿಯೆಯು ನಡೆದಿರುವುದಿಲ್ಲ. ಆದುದರಿಂದ ಮಾಹಿತಿಯು ಶೂನ್ಯವಾಗಿರುತ್ತದೆ. | | | | | | |

**ದಿನಾಂಕ:** 06.04.2023
**ಸ್ಥಳ:** ಬೆಂಗಳೂರು

Signed by Raj Kishore
Singh, Ifs
Date: 06-04-2023 15:37:41

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)